ದಿನಾಂಕಃ 07-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಸಿ.ಬಿ. ವಕೀಲರಿಂದಃ**

ಸ.ನಂ.83/6 ರ 28 ಗುಂಟೆಯ ಆರ್.ಟಿ.ಸಿ ಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಒಪ್ಪಿದ ಮೇರೆಗೆ ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ಮುಂದುವರೆದು ಪ್ರತಿವಾದಿಗಳು ಮೋಸದಿಂದ ಮಾಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಿಡಿ-2 ರ ಪ್ರಕಾರ ಪ್ರತಿವಾದಿ 2 ರಿಂದ 4 ರವರ ಹೆಸರಿಗೆ ಎಂ.ಆರ್.11/2004-05 ರ ಪ್ರಕಾರ ಜಂಟಿಯಾಗಿ ಖಾತೆಯಾಗಿರುವ ದಾಖಲೆ ಎಂದರೆ

ಸರಿ. ಆದರೆ ಅವರು ಹೇಗೆ ಮಾಡಿಸಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ.ನಂ.83/6 ರ 2010-11 ನೇ ಸಾಲಿನ ಆರ್.ಟಿ.ಸಿ ಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಒಪ್ಪಿದ ಮೇರೆಗೆ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಈ ದಾವೆಯನ್ನು ನನ್ನ ತಂದೆ 2011 ರಲ್ಲಿ ಹೂಡಿರುತ್ತಾರೆ. ಸ.ನಂ.83/6 ರ 2011-12 ನೇ ಸಾಲಿನ ಆರ್.ಟಿ.ಸಿ ಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಒಪ್ಪಿದ ಮೇರೆಗೆ ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಮುಂದುವರೆದು ಮೋಸದಿಂದ ಮಾಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಆರ್.ಟಿ.ಸಿ ಯನ್ನು ತೋರಿಸಿದ್ದು, ಅದು 2010-11 ನೇ ಸಾಲಿನ ಆರ್.ಟಿ.ಸಿ ಯಾಗಿದ್ದು, ಸಾಕ್ಷಿಯು ಅದನ್ನು ಒಪ್ಪಿದ ಮೇರೆಗೆ ಅದನ್ನು **ನಿಡಿ-5** ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ ಪೂರ್ವಕ್ಕೆ ಸ.ನಂ.83/5 ಇರುತ್ತದೆಂದರೆ ಸರಿ, ಪಶ್ಚಿಮಕ್ಕೆ 83/8 ಇರುತ್ತದೆಂದರೆ ಸಾಕ್ಷಿಯು ಮುಂದಿನ ಸುನಾವಣಾ ದಿನಾಂಕದಂದು ಹೇಳುತ್ತೇನೆಂದು ಉತ್ತರಿಸುತ್ತಾರೆ. ಸದರಿ ಬಗ್ಗೆ ನಿಮಗೆ ಮಾಹಿತಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರವರಿಗೆ ಕ್ರಯವಾಗಿರುವ ಕ್ರಯ ಪತ್ರದಲ್ಲಿರುವ ಚೆಕ್ಕುಬಂಧಿ ನನಗೆ ಗೊತ್ತು. ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸ.ನಂ.83/6 ರ ದಕ್ಷಿಣ ಭಾಗಕ್ಕೆ ಸಿದ್ದಪ್ಪ ರವರ ಜಮೀನು ಇರುತ್ತದೆಂದರೆ ಸುಳ್ಳು. ಸದರಿ ಜಮೀನು ಮೂಲತಃ ಪ್ರತಿವಾದಿ ನಂ.2 ರಿಂದ 4 ರವರಿಗೆ ಸೇರಿದ ಜಮೀನು ಎಂದರೆ ಸುಳ್ಳು. ಸ.ನಂ.83/3 ರ ಜಮೀನಿನ ಆರ್.ಟಿ.ಸಿ ಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಸ.ನಂ.83/3 ರ ಆರ್.ಟಿ.ಸಿ ಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಪರಿಶೀಲಿಸಿ ಒಪ್ಪಿದ ಮೇರೆಗೆ ಅದನ್ನು **ನಿಡಿ-6** ಎಂದು ಗುರುತಿಸಲಾಯಿತು.

ನಮ್ಮ ತಂದೆಯವರ ಜೀವಿತ ಕಾಲದಲ್ಲಿ ಎ.ಸಿ ಕಚೇರಿ ಹುಣಸೂರಿನಲ್ಲಿ ಕಂದಾಯ ಮೇಲ್ಮನವಿಯನ್ನು ಸಲ್ಲಿಸಿದ್ದರಾ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಸಲ್ಲಿಸಿದ್ದರು

ಓ.ಎಸ್. 121/2011
ಪಿ.ಡಬ್ಲ್ಯೂ-1

ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಈ ದಾವೆಯನ್ನು ಯಾವ ವಿಚಾರವನ್ನು ನಮೂದು ಮಾಡಿ ಹೂಡಿರುತ್ತಾರೆಂಬ ವಿಚಾರ ಗೊತ್ತಾ ಎಂದರೆ ಸಾಕ್ಷಿ ದಾವಾ ಆಸ್ತಿ ನಮಗೆ ಸೇರಬೇಕೆಂಬ ವಿಚಾರ ಗೊತ್ತು ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಮ್ಮ ತಂದೆ ಪ್ರತಿವಾದಿ ನಂ.1 ರವರ ಹೆಸರಿಗೆ ಆದಂತಹ ಖಾತೆಯನ್ನು ರದ್ದು ಮಾಡಿ ಕೊಡಿ ಎಂದು ಹುಣಸೂರು ಎ.ಸಿ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆಂಬ ಅಂಶ ನಮೂದು ಮಾಡಿರುತ್ತಾರೆಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೇ.ಸರಿ ಇದೆ.**

**ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**